(ಇಂದು ದಿನಾಂಕ: 19-06-2025 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಎದುರುದಾರರ ನಂ.2 ರಿಂದ 4 ಪರ ವಕೀಲರಿಂದ.**

2. ನನ್ನ ಅರ್ಜಿಯಲ್ಲಿ ನನ್ನ ಮಗನಿಗೆ ತಲೆಗೆ ಪೆಟ್ಟಾಗಿದೆ ಅಂತಾ ಹೇಳಿಲ್ಲ ಎಂದರೆ ಸರಿ. ನನ್ನ ಮಗನಿಗೆ ನಿಪಿ-19 ಗಾಯದ ಪ್ರಮಾಣ ಪತ್ರದ ಪ್ರಕಾರ ಸಾದಾ ಸ್ವರೂಪದ ಗಾಯಗಳಾಗಿರುತ್ತವೆ ಎಂದರೆ ಸರಿ. ನನ್ನ ಮಗ ಆಸಿಫ್ ಗಾಯಾಳು ಆಗಿದ್ದರಿಂದ ಅವರು ನ್ಯಾಯಾಲಯಕ್ಕೆ ಹಾಜರಾಗಬೇಕು ಎಂದರೆ ಸರಿಯಲ್ಲ. ನನ್ನ ಮಗ ಆಸಿಫ್ ನ್ಯಾಯಾಲಯದ ಮುಂದೆ ಇಂದು ಹಾಜರಾಗಿದ್ದಾರೆ.

3. ಅಪಘಾತವು ಬಸ್ಸಿನ ತಪ್ಪಿನಿಂದ ಆಗಿದೆ ಆದ್ದರಿಂದ ಅವರನ್ನು ಪಕ್ಷಗಾರರನ್ನಾಗಿ ಮಾಡಿದ್ದಾರೆ ಎಂದರೆ ಸರಿ. ಅಪಘಾತವಾದಾಗ ನಾನು ಸಿಂಧನೂರಿನ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ನಂತರ ಮಲ್ಲಿಕಾರ್ಜುನ ಆಸ್ಪತ್ರೆಗೆ ಹೋಗಿರುತ್ತೇನೆ. ಮಲ್ಲಿಕಾರ್ಜುನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ನಾನು ಯಾವುದೇ ದಾಖಲೆ ಸಲ್ಲಿಸಿಲ್ಲ ಎಂದರೆ ಸರಿ. ಸೂರ್ಯಾ ಸ್ಕ್ಯಾನಿಂಗ್ ಸೆಂಟರ್ ನಲ್ಲಿ ಸ್ಕ್ಯಾನಿಂಗ್ ಮಾಡಿಸಿದ್ದೇನೆ ಅದಕ್ಕೆ ಸಂಬಂಧಪಟ್ಟಂತೆ ದಾಖಲೆಗಳನ್ನು ಸಲ್ಲಿಸಿಲ್ಲ. ಆಯುರ್ವೇದಿಕ್ ದಾಖಲೆ ಸಲ್ಲಿಸಿಲ್ಲ. ಬಿಲ್ಲುಗಳನ್ನು ಸೃಷ್ಟಿಸಿ ಹಾಕಿದ್ದೇನೆ ಎಂದರೆ ಸರಿಯಲ್ಲ. ನಾನು ಬಿಲ್ಲುಗಳ ಝೆರಾಕ್ಸ್ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆಲಂಬಾಷಾರವರಿಗೆ ಎರಡು ಬಾಡಿಗೆ ಕಾರುಗಳು ಇರುತ್ತವೆ. ಬಿಲ್ಲುಗಳಲ್ಲಿ ಜಿಎಸ್‌ಟಿ ನಂಬರ ಇಲ್ಲ ಎಂದರೆ ಸರಿಯಲ್ಲ. ನಿಪಿ-13 ಬಿಲ್ಲಲ್ಲಿ ನನ್ನ ಹೆಸರು ಇಲ್ಲ ಎಂದರೆ ಸರಿ. ವೈದ್ಯಕೀಯ ಬಿಲ್ಲುಗಳನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನೇ ಹೆಚ್ಚಿಗೆ ಹಣವನ್ನು ನಮೂದು ಮಾಡಿ ಮೆಡಿಕಲ್ ಬಿಲ್ಲುಗಳನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ಲಾರಿ ಚಾಲಕನ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಅಂಗ ನ್ಯೂನತೆ ಇರುವುದಿಲ್ಲ ಎಂದರೆ ಸರಿಯಲ್ಲ.

4. ಮಹಮ್ಮದ್ ಜಾನಿಯವರಿಗೆ ಸೂಕ್ತವಾದ ಚಾಲನಾ ಪತ್ರ ಇಲ್ಲದೇ ಇರುವುದರಿಂದ ಮತ್ತು ಎದುರುದಾರ ನಂ.2 ರವರು ಲಾರಿ ನಂ.ಟಿ ಎಸ್ 07 ಯು ಇ 4797 ನೇದ್ದಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲೆಗಳನ್ನು ಸಲ್ಲಿಸದ ಕಾರಣ ಎದುರುದಾರ ನಂ.3 ಮತ್ತು 4 ಇವರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಎದುರುದಾರರ ನಂ.2 ರವರು ಮೋ.ವಾ. ಕಾಯ್ದೆ ಮತ್ತು ವಿಮಾ ಶರತ್ತುಗಳನ್ನು ಉಲ್ಲಂಘನೆ ಮಾಡಿದ ಕಾರಣ ಎದುರುದಾರ ನಂ.3 ಮತ್ತು 4 ಇವರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಎದುರುದಾರ ನಂ.1 ರವರ ಪರ ವಕೀಲರಿಂದ.</u>**

5. ಬಸ್ ಚಾಲಕನು ಸಂಚಾರಿ ನಿಯಮಗಳನ್ನು ಪಾಲಿಸಿ ಅತೀ ಜಾಗರೂಕತೆಯಿಂದ ಬಸ್ ಚಾಲನೇ ಮಾಡುತ್ತಿದ್ದ ಎಂದರೆ ಸರಿ. ಅಪಘಾತ ಲಾರಿ ಚಾಲಕನ ತಪ್ಪಿನಿಂದ ಆಗಿದೆ ಎಂದರೆ ಸರಿ. ಅಪಘಾತ ಲಾರಿಯ ವಿಮಾ ಕಂಪನಿಯವರು ಪರಿಹಾರ ಕೊಡಲು ಹೊಣೆಗಾರರು ಎಂದರೆ ಸರಿ. ಕ.ರಾ.ರ.ಸಾ. ಸ. ಬಸ್ ಚಾಲಕ ಜಾಗರೂಕತೆಯಿಂದ ಬಸ್ ಚಾಲನೆ ಮಾಡಿದ್ದರಿಂದ ಸಂಸ್ಥೆ ಪರಿಹಾರ ಕೊಡಲು ಹೊಣೆಗಾರ ಅಲ್ಲ ಎಂದರೆ ಸರಿ. ಬಸ್ ಚಾಲಕನ ತಪ್ಪು ಇರದೇ ಇದ್ದರು ಅವರನ್ನು ತಪ್ಪಾಗಿ ಪಕ್ಷಗಾರರನ್ನಾಗಿ ಮಾಡಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು,
ಸಿಂಧನೂರು